ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ:142:ಜಿಪಸ:2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 17-12-2013.

## ಸುತ್ತೋಲೆ

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 310ರಂತೆ ಜಿಲ್ಲಾ ಯೋಜನಾ ಸಮಿತಿಯನ್ನು ಪ್ರತಿ ಜಿಲ್ಲೆಯಲ್ಲೂ ರಚಿಸುವುದು ಕಾನೂನು ಬದ್ಧವಾಗಿರುತ್ತದೆ. ಅದರಂತೆ ಪ್ರತಿ ಜಿಲ್ಲೆಯಲ್ಲೂ ಯೋಜನಾ ಸಮಿತಿಯನ್ನು ರಚಿಸಲಾಗಿರುತ್ತದೆ. ಸರ್ಕಾರವು ಕ್ರಮಾಂಕ ಗ್ರಾಅಪ 229 ಜಿಪಸ 2000 ದಿನಾಂಕ: 12.04.2001ರಲ್ಲಿ ಸುತ್ತೋಲೆ ಹೊರಡಿಸಿ ಜಿಲ್ಲಾ ಯೋಜನಾ ಸಮಿತಿಯ ಪಾತ್ರ ಮತ್ತು ಕಾರ್ಯಗಳ ಕುರಿತು ಮಾರ್ಗದರ್ಶನ ನೀಡಿರುತ್ತದೆ. ಅದರಲ್ಲಿ ಜಿಲ್ಲಾ ಯೋಜನಾ ಸಮಿತಿಯ ನಿಧಿಯನ್ನು ಸ್ಥಾಪಿಸುವುದು ಕೂಡಾ ಒಂದಾಗಿರುತ್ತದೆ. ಅದರನ್ವಯ ಸ್ಥಳೀಯ ಅಂಗಗಳು ವಂತಿಗೆಯನ್ನು ನೀಡಬೇಕೆಂದು ಸೂಚಿಸಲಾಗಿರುತ್ತದೆ ಜೊತೆಗೆ ಸರ್ಕಾರದಿಂದ Grants-in-aldನ್ನು ಸಹ ಒದಗಿಸಬೇಕಾಗುತ್ತದೆ ಎಂದು ಸೂಚಿಸಿರುತ್ತದೆ. ಸದರಿ ನಿಧಿಯನ್ನು ಸದಸ್ಯರುಗಳಿಗೆ ಉಪವೇಶನ ಶುಲ್ಕವನ್ನು ಪಾವತಿಸುವದಕೊಸ್ಕರ ಹಾಗೂ ಇತರೆ ಉದ್ದೇಶಗಳಿಗೆ ಪಾವತಿಸುವ ಸಲುವಾಗಿ ಉಪಯೋಗಿಸಬೇಕಾಗಿರುತ್ತದೆ.

ಪ್ರತಿಯೊಂದು ಸ್ಥಳಿಯ ಅಂಗವು ಈ ಕೆಳಕಂಡಂತೆ ವಾರ್ಷಿಕ ವಂತಿಕೆಯನ್ನು ನೀಡಬೇಕಾಗಿರುತ್ತದೆ.

| | | |
|---|---|---|
| ಗ್ರಾಮ ಪಂಚಾಯತಿಗಳು | ರೂ. | 5,000/- |
| ತಾಲ್ಲೂಕು ಪಂಚಾಯತಿಗಳು | ರೂ. | 25,000/- |
| ಜಿಲ್ಲಾ ಪಂಚಾಯತಿ | ರೂ. | 2,00,000/- |
| ಪಟ್ಟಣ ಪಂಚಾಯತಿ | ರೂ. | 7,500/- |
| ಟಿ.ಎಮ್.ಸಿ. | ರೂ. | 25,000/- |
| ಸಿ.ಎಮ್.ಸಿ. | ರೂ. | 1,00,000/- |
| ನಗರ ಪಾಲಿಕೆ | ರೂ. | 2,00,000/- |

ಇತ್ತೀಚೆಗೆ ನಿಗಧಿಪಡಿಸಿದ ಗುರಿಗಿಂತ ವಂತಿಗೆಯು ಕಡಿಮೆ ಸಂಗ್ರಹವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದೇ ರೀತಿ ಮುಂದುವರೆದಲ್ಲಿ ಜಿಲ್ಲಾ ಯೋಜನಾ ಸಮಿತಿಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೆರವೇರಿಸಲು ಸಾಧ್ಯವಾಗುವುದಿಲ್ಲ ಆದುದರಿಂದ ಸದರಿ ಸಮಿತಿಯು ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕಾದರೆ ವಂತಿಗೆಯನ್ನು ಸಂಗ್ರಹಿಸುವ ಪ್ರಕ್ರಿಯೆಯು ತೀವ್ರತರವಾಗಿ ನಡೆಯಬೇಕಾಗಿರುತ್ತದೆ. ಆದುದರಿಂದ ವಾರ್ಷಿಕ ವಂತಿಗೆಯನ್ನು ಕಡ್ಡಾಯವಾಗಿ ಮೇಲೆ ನಿಗಧಿಪಡಿಸಿರುವಂತೆ ಸಂಗ್ರಹಿಸುವ ಸಲುವಾಗಿ ಅಗತ್ಯ ಕ್ರಮವನ್ನು ಕೈಗೊಂಡು ಜಿಲ್ಲಾ ಯೋಜನಾ ಸಮಿತಿಯ ಕಾರ್ಯವಿಧಾನವನ್ನು ಅತ್ಯುತ್ತಮವಾಗಿ ಜರುಗಿಸಲು ಅನುವಾಗುವಂತೆ ಈ ಮೂಲಕ ಜಿಲ್ಲಾ ಪಂಚಾಯತಿಯ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಕಳುಹಿಸಬೇಕೆಂದು ಸೂಚಿಸಲಾಗಿದೆ.

17/12/13

(ಕೆಯಾಲಕ್ಕಿಗೌಡ)
ನಿರ್ದೇಶಕರು (ಪಂ.ರಾಜ್) ಹಾಗೂ
ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಇವರಿಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.